ಓ ಎಸ್ ನಂ. 101/2019
ಪಿ ಡಬ್ಲ್ಯೂ: 1
ದಿನಾಂಕ 20-03-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 1ನೇ ಪ್ರತಿವಾದಿ ಪರ: ಶ್ರೀ ಕೆ ಎ ವಕೀಲರಿಂದ:

ಈ ಕೇಸನ್ನು ಯಾರು ಯಾರ ವಿರುದ್ದ ಯಾವ ಕಾರಣಕ್ಕಾಗಿ ಹಾಕಿದ್ದಾರೆಂದು ನನಗೆ ಗೊತ್ತು. ಸಾಕ್ಷಿ ಮುಂದುವರೆದು ನಮಗೆ ಬರಬೇಕಾದ ಪರಿಹಾರದ ಹಣವನ್ನು ಬೇರೆಯವರಿಗೆ ಹಾಕಿದ್ದಾರೆ ಎಂದು ನುಡಿದಿರುತ್ತಾರೆ. ಸರ್ವೆ ನಂ.176 ರ ಆಸ್ತಿಗೆ ಸಂಬಂದಪಟ್ಟಂತೆ ಕೇಸನ್ನು ಹಾಕಲಾಗಿದೆ. ಈ ಕೇಸನ್ನು ಗೋವಿಂದೇಗೌಡ ಮತ್ತು ಶಾರದಮ್ಮರವರ ವಿರುದ್ದ ಸಲ್ಲಿಸಲಾಗಿದೆ. ದಾವೆಯಲ್ಲಿ ಯಾವ ಪರಿಹಾರ ಕೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಭೂಸ್ವಾಧೀನಾಧಿಕಾರಿಯವರು ನಮ್ಮ ಜಮೀನಿನಲ್ಲಿ 2 ಎಕರೆ 11 ಗುಂಟೆ ಜಮೀನನ್ನು ವಶಪಡಿಸಿಕೊಂಡಿದ್ದು, ಅದರಲ್ಲಿ 1285 ಅಡಿಕೆ ಮರಗಳು, 115 ತೆಂಗಿನ ಮರಗಳು ಮತ್ತು 16 ಸಪೋಟ ಮರಗಳು, 1 ಎಳನೀರು ಮರ ಇತ್ತು ಎಂದು ನುಡಿದಿರುತ್ತಾರೆ. ಭೂ ಸ್ವಾಧೀನಾಧಿಕಾರಿಗಳು ನಮ್ಮ ಆಸ್ತಿಗೆ ಸಂಬಂದಪಟ್ಟ ಪರಿಹಾರವನ್ನು ಬೇರೆಯವರಿಗೆ ನೀಡಿದ್ದರಿಂದ ಈ ದಾವೆ ಸಲ್ಲಿಸಲಾಗಿದೆ. ದಾವೆಯಲ್ಲಿ ಎ ಮತ್ತು ಬಿ ಷೆಡ್ಯೂಲ್ ಆಸ್ತಿಗಳು ಇವೆ. ಎ ಷೆಡ್ಯೂಲ್ ನಲ್ಲಿ ಸರ್ವೆ ನಂ.176 ರ ಆಸ್ತಿ ಇದೆ. ಎ ಷೆಡ್ಯೂಲ್ ಆಸ್ತಿಯ ಚಕ್ಕುಬಂದಿ ನನಗೆ ಗೊತ್ತು. ಪೂರ್ವಕ್ಕೆ ನಮ್ಮದೇ ಸ್ವತ್ತು, ಪಶ್ಚಿಮಕ್ಕೆ ಶಾರದಮ್ಮ ಕೋಂ ಗೋವಿಂದೇಗೌಡ, ಉತ್ತರಕ್ಕೆ ರಾಮಚಂದ್ರಪ್ಪ ಮತ್ತು ದಕ್ಷಿಣಕ್ಕೆ ಶಿವಕುಮಾರ ಶೆಟ್ಟಿ ಇವರುಗಳ ಆಸ್ತಿ ಇದೆ. ನಾನು ಈ ಹೇಳಿದ

ಚಕ್ಕುಬಂದಿಯಲ್ಲಿರುವ ಆಸ್ತಿಯನ್ನು ಹಿರಿಯಣ್ಣಯ್ಯಹೊಳ್ಳ ಮತ್ತು ಸರಸ್ವತಮ್ಮನವರ ಮಕ್ಕಳಾದ ದಿನೇಶ, ಶ್ರೀರಾಮ, ಶ್ರೀಕಾಂತ ಮತ್ತು ಇತರೆ ಹೆಣ್ಣು ಮಕ್ಕಳ ಮೂಲಕ 2014 ರಲ್ಲಿ ಖರೀದಿಸಲಾಗಿದೆ. ಅವರಿಂದ ಒಟ್ಟು 9 ಎಕರೆ ಜಮೀನು ಖರೀದಿಸಲಾಗಿದೆ. ಸಾಕ್ಷಿ ಮುಂದುವರೆದು ಅದರಲ್ಲಿ 4 ಎಕರೆ ಆಸ್ತಿಗೆ ತಕರಾರು ಇದೆ ಎಂದು ನುಡಿದಿರುತ್ತಾರೆ.

ಸರ್ವೆ ನಂ.176 ರಲ್ಲಿ 4 ಎಕರೆ, ಸರ್ವೆ ನಂ.182 ರಲ್ಲಿ 4 ಎಕರೆ ಮತ್ತು ಸರ್ವೆ ನಂ.183 ರಲ್ಲಿ 1 ಎಕರೆ ಒಟ್ಟು 9 ಎಕರೆ. ಸದರಿ ಮೂರು ಆಸ್ತಿಗಳು ಒಂದಕ್ಕೊಂದು ಹೊಂದಿಕೊಂಡಂತೆ ಇವೆ ಎಂದರೆ ನಿಜ. ಸದರಿ 9 ಎಕರೆ ಆಸ್ತಿಯನ್ನು ಖರೀದಿಸಿ ನನ್ನ ಹೆಂಡತಿಯ ಹೆಸರಿನಲ್ಲಿ ನೊಂದಣಿ ಮಾಡಿಸಲಾಗಿದೆ. ನನ್ನ ಹೆಂಡತಿ ನಿವೃತ್ತ ಶಿಕ್ಷಕರು ಎಂದರೆ ನಿಜ. ನಾನು ನಿವೃತ್ತ ಶಿಕ್ಷಕ ಎಂದರೆ ನಿಜ. 9 ಎಕರೆ ಜಮೀನು ಖರೀದಿಸುವ ಕಾಲಕ್ಕೆ ನನ್ನ ಹೆಂಡತಿ ಶಿಕ್ಷಕರಾಗಿ ಕರ್ತವ್ಯ ಮಾಡುತ್ತಿದ್ದರು, ನಾನು ನಿವೃತನಾಗಿದ್ದೇನು. ಆಸ್ತಿಯನ್ನು ಖರೀದಿಸುವ ಮೊದಲು ನಾನು ಮತ್ತು ನನ್ನ ಹೆಂಡತಿ ಇಬ್ಬರು ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇವೆ. ಸರ್ವೆ ನಂ.176 ರ ಆಸ್ತಿಗೆ ಸಂಬಂದಪಟ್ಟಂತೆ ನಾನು ರಿಜಿಸ್ಟರ್ ಪತ್ರ, ಪಹಣಿ, ಮ್ಯುಟೇಷನ್ ಗಳನ್ನು ಪರಿಶೀಲನೆ ಮಾಡಿರುತ್ತೇನೆ. ನನಗೆ ಆಸ್ತಿಯನ್ನು ಮಾರಾಟ ಮಾಡಿದವರ ಹೆಸರಿಗೆ ಪೌತಿವಾರಸು ಆಧಾರದ ಮೇಲೆ ಖಾತೆ ಬಂದಿರುತ್ತದೆ. ಆ ರೀತಿ ಖಾತೆ ಯಾವಾಗ ಬಂದಿದೆ ಎಂದು ನನಗೆ ಗೊತ್ತಿಲ್ಲ. ಮೊದಲು ಆಸ್ತಿಯ ಖಾತಿ ಹಿರಿಯಣ್ಣಯ್ಯ ಹೊಳ್ಳರವರ ಹೆಸರಿನಲ್ಲಿತ್ತು. ಹಿರಿಯಣ್ಣಯ್ಯ

ಹೊಳ್ಳರವರು ಸದರಿ ಆಸ್ತಿಯನ್ನು 1967ರಲ್ಲಿ ಹೆಚ್ ಸೋಮಶೇಖರ್ ಇವರಿಂದ ಖರೀದಿಸಿರುತ್ತಾರೆ.

ನಿಪಿ-6ರ ದಾಖಲೆಯನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ನಿಪಿ-6ರ ದಾಖಲೆಯಲ್ಲಿ ಎರಡು ಸರ್ವೆ ನಂಬರುಗಳು ಇವೆ. ಅವರೆಂದರೆ ಸರ್ವೆ ನಂ.176 ಮತ್ತು ಇನ್ನೊಂದು ಸರ್ವೆ ನಂಬರು ನನಗೆ ಸರಿಯಾಗಿ ನೆನಪಿಲ್ಲ. ನಿಪಿ-6ರ ದಾಖಲೆಯ ಪ್ರಕಾರ ಒಟ್ಟು 5 ಎಕರೆ ಆಸ್ತಿಯನ್ನು ಹೆಚ್ ಸೋಮಶೇಖರ್ ರವರಿಂದ ಖರೀದಿಸಲಾಗಿದೆ ಎಂದರೆ ನಿಜ. ನಿಪಿ-6ರ ದಾಖಲೆಯಲ್ಲಿ ಯಾವ ಚಕ್ಕುಬಂದಿ ಬರೆಯಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿಯು ಮೊದಲು ನಾನು ಹೇಳಿದ ಚಕ್ಕುಬಂದಿ ನಮೂದಾಗಿತ್ತು ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರೆದು ಚಕ್ಕುಬಂದಿ ಬದಲಾವಣೆಯಾಗುತ್ತಿರುತ್ತವೆ ನನಗೆ ಸರಿಯಾಗಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

ನಾನು ಖರೀದಿಸಿದ ಆಸ್ತಿಯ ಪೂರ್ವಕ್ಕೆ ಅಮೃತ್ ಮಹಲ್ ಕಾವಲು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮದೇ ಆಸ್ತಿ ಬರುತ್ತದೆ ಎಂದು ನುಡಿದಿರುತ್ತಾರೆ. 9 ಎಕರೆ ಆಸ್ತಿಯನ್ನು ಖರೀದಿಸುವ ಕಾಲಕ್ಕೆ ಅವು ತೆಂಗು ಮತ್ತು ಅಡಿಕೆ ತೋಟವಾಗಿದ್ದವು. ಸಾಕ್ಷಿ ಮುಂದುವರೆದು ನಾನು ಖರೀದಿಸಿದ ನಂತರ ನಾನು ಅಭಿವೃದ್ಧಿ ಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಆಸ್ತಿಯನ್ನು ಖರೀದಿಸಿದ ಕಾಲಕ್ಕೆ ಯಾವುದೇ ತೋಟ ಇರಲಿಲ್ಲ, ಒಣಗಿ ಹೋಗಿತ್ತು ಎಂದರೆ ಸರಿಯಲ್ಲ. ನಾನು ಆಸ್ತಿಯನ್ನು ಎಷ್ಟು ಮೊತ್ತಕ್ಕೆ ಖರೀದಿಸಿದ್ದೆ ಎಂದು ಈಗ

ನನಗೆ ಮರೆತುಹೋಗಿದೆ. ಸಾಕ್ಷಿ ಮುಂದುವರೆದು 4 ಎಕರೆ ಜಮೀನನ್ನು 5 ಲಕ್ಷ ರೂಗಳಿರಬಹುದು ಎಂದು ನುಡಿದಿರುತ್ತಾರೆ. ಇನ್ನೊಂದು ಆಸ್ತಿಯನ್ನು 5 ಲಕ್ಷ ಮತ್ತು ಮತ್ತೊಂದನ್ನು ಒಂದೂವರೆ ಲಕ್ಷಕ್ಕೆ ಖರೀದಿಸಿದ್ದೇನೆ. ಒಟ್ಟು 11.5 ಲಕ್ಷ ರೂಗಳಿಗೆ ನೀವು ಎಲ್ಲಾ ಆಸ್ತಿಗಳನ್ನು ಖರೀದಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿದಿರುತ್ತಾರೆ.

ಸರ್ವೆ ನಂ.176 ರ ಉತ್ತರ ಭಾಗಕ್ಕೆ ಗೋವಿಂದೇಗೌಡರ ಆಸ್ತಿ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರಸ್ತುತ ಉತ್ತರಕ್ಕೆ ರಾಮಚಂದ್ರಪ್ಪನವರು ಇದ್ದು, ಪಶ್ಚಿಮಕ್ಕೆ ಗೋವಿಂದೇಗೌಡರ ಆಸ್ತಿ ಬರುತ್ತದೆ ಎಂದು ನುಡಿದಿರುತ್ತಾರೆ. ಸರ್ವೆ ನಂ.176 ರ ಆಸ್ತಿಯನ್ನು ನಿಪಿ-5 ರ ಕ್ರಯಪತ್ರದ ಮೂಲಕ ಖರೀದಿಸಲಾಗಿದೆ ಎಂದರೆ ನಿಜ. ನಿಪಿ-5 ರ ದಾಖಲೆಯಲ್ಲಿ ಖುಷ್ಕಿ ಜಮೀನು ಎಂದು ನಮೂದು ಮಾಡಲಾಗಿದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಪಹಣಿಯಲ್ಲಿ ಇದ್ದದ್ದನ್ನೆ ನಮೂದು ಮಾಡಲಾಗಿದೆ ಎಂದು ನುಡಿದಿರುತ್ತಾರೆ. ಆಸ್ತಿಯಲ್ಲಿ ಯಾವುದೇ ಮರ ಇಲ್ಲದ ಕಾರಣ ಖುಷ್ಕಿ ಜಮೀನು ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನಾನು ಖರೀದಿಸಿದ ಆಸ್ತಿಯಲ್ಲಿ ಯಾವುದೇ ಮರಗಳು ಇರಲಿಲ್ಲ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಗೆ ಬಿ ಷೆಡ್ಯೂಲ್ ಆಸ್ತಿ ಹೇಗೆ ಬಂದಿತೆಂದು ನನಗೆ ಸರಿಯಾಗಿ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರ ಹೆಂಡತಿ ಲಕ್ಕಮ್ಮರವರಿಂದ ಖರೀದಿಸಿದ್ದು, ಅವರ ಹೆಂಡತಿ ಮರಣ ಹೊಂದಿದ ನಂತರ ಪೌತಿ ಆಧಾರದ ಮೇಲೆ 1 ನೇ ಪ್ರತಿವಾದಿ ಹೆಸರಿಗೆ ಬಂದಿರಬಹುದು

ಎಂದು ನುಡಿದಿರುತ್ತಾರೆ. ಲಕ್ಕಮ್ಮನವರಿಗೆ ಆಸ್ತಿ ಹೇಗೆ ಬಂದಿತೆಂದು ನನಗೆ ಗೊತ್ತಿಲ್ಲ. 1967 ರಲ್ಲಿ ಸರಸ್ವತ್ತಮ್ಮ ಖರೀದಿಸಿದ ಆಸ್ತಿಯಲ್ಲಿ ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ನಿಜ. ಶಾರದಮ್ಮನವರು ಖರೀದಿಸಿದ ನಂತರ ಅವರು ಸಹ ಅದರಲ್ಲಿ ಇಂದಿಗೂ ಸ್ವಾಧೀನ ಇದ್ದಾರೆ ಎಂದರೆ ನಿಜ. ಶಾರದಮ್ಮನವರ ಮರಣದನಂತರ 1 ನೇ ಪ್ರತಿವಾದಿ ಹೆಸರಿಗೆ ಖಾತೆ ಬದಲಾವಣೆಯಾಗಿದೆ ಎಂದರೆ ನಿಜ. ಶಾರದಮ್ಮನವರ ಹೆಸರಿನಲ್ಲಿದ್ದ ಆಸ್ತಿಯ ಪಕ್ಕದಲ್ಲಿ 1 ನೇ ಪ್ರತಿವಾದಿಗೆ 4 ಎಕರೆ ಆಸ್ತಿ ಇತ್ತು ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಅವರು ಅದರಲ್ಲಿ ತೆಂಗು, ಬಾಳೆ ಮತ್ತು ಅಡಿಕೆ ತೋಟ ಮಾಡಿದ್ದಾರೆ ಎಂದರೆ ನಿಜ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.